ಅ. ಕೋಮು ಸೌಹಾರ್ದತೆಗಾಗಿ 1993ರ ಜನವರಿ–ಫೆಬ್ರವರಿ ತಿಂಗಳಿನಲ್ಲಿ ಮಾನವ ಸರಪಳಿಯನ್ನು ರಾಜ್ಯದಾದ್ಯಂತ ರಚಿಸಲಾಗಿತ್ತೇ ?

ಆ. ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಿದ ಒತ್ತ ಎಷ್ಟು ? (ವಿವಿಧ ಸಂಘ – ಸಂಸ್ಥೆಗಳಿಗಾಗಿ ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. ಇಲ್ಲ. ದಿನಾಂಕ: 30.1.93ರಂದು ಈ ಕೆಳಕಂಡ ಸ್ಥಳಗಳಲ್ಲಿ ಮಾತ್ರ ಮಾನವ ಸರಪಳಿಯನ್ನು ಏರ್ಪಡಿಸಲಾಗಿತ್ತು.

1. ಹುಬ್ಬಳಿಯಿಂದ ಧಾರವಾಡ
2. ಧಾರವಾಡದಿಂದ ಬೆಳಗಾಂ
3. ಗುಲ್ಬರ್ಗಾದಿಂದ ಬೀದರ್
4. ಬೆಂಗಳೂರಿನಿಂದ ಮೈಸೂರು
5. ಮಂಗಳೂರಿನಿಂದ ಉಡುಪಿ

ಆ. 40 ಲಕ್ಷ ರೂ.ಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.)

'ಕೋಮು ಸೌಹಾರ್ದತಾ ಸಪ್ತಾಹ'ದ ಅಂಗವಾಗಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿರುವುದನ್ನು ತೋರಿಸುವ ಪಟ್ಟಿ.

ಜಿಲ್ಲೆಗಳು	ರೂಪಾಯಿಗಳು (ಲಕ್ಷಗಳಲ್ಲಿ)
1. ಬೆಂಗಳೂರು (ಗ್ರಾಮಾಂತರ)	5.00
2. ಬೆಳಗಾಂ	5.00
3. ಧಾರವಾಡ	5.00
4. ಗುಲ್ಬರ್ಗಾ	5.00
5. ಬೀದರ್	5.00
6. ಮಂಡ್ಯ	5.00
7. ಮೈಸೂರು	5.00
8. ದಕ್ಷಿಣ ಕನ್ನಡ	5.00
ಒಟ್ಟು	40.00

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ದಿನಾಂಕ 2.3.1993ರ 10ನೇ ಪಟ್ಟಿಯಲ್ಲಿರುವ 86 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 577, 523, 769, 488, 351, 99, 576, 737, 738, 1334 ಎ, 959, 1330, 1356, 1946, 1329, 1310, 1292, 1215 ಮತ್ತು 1282 ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 37 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸರ್ಕಾರದ ಸೌಲಭ್ಯಗಳು.

504 (1157): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸಂಬಂಧಿಸಿದಂತೆ, ಪಿಂಚಣಿ, ಉಚಿತ ಬಸ್ ಪಾಸ್, ವೈದ್ಯಕೀಯ ಸೌಲಭ್ಯ, ನಿವೇಶನ ಮಂಜೂರಾತಿ, ಶಿಕ್ಷಣ ಸೌಲಭ್ಯ ಇತ್ಯಾದಿ ಎಷ್ಟು ಬೇಡಿಕೆಗಳು ಸರ್ಕಾರದ ಮುಂದೆ ಬಾಕಿ ಇವೆ:

2. ಇವುಗಳ ಪೈಕಿ ಸದನದಲ್ಲಿ ನೀಡಿದ ಭರವಸೆಯನ್ನನುಸರಿಸಿ, ಎಷ್ಟು ಬೇಡಿಕೆಗಳನ್ನು ಸರ್ಕಾರ ಪರಿಶೀಲಿಸಿದೆ:

3. ಉಳಿದ ಬೇಡಿಕೆಗಳನ್ನು ಯಾವಾಗ ಪೂರೈಸಲಾಗುವುದು ?

4. ಬಾಕಿ ಇರುವ ಬೇಡಿಕೆಗಳನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ):–

1. ಅನುಬಂಧ 'ಎ'ನ್ನು ಲಗತ್ತಿಸಿದೆ.

2. ಒಂದು

3. ಉಳಿದ ಬೇಡಿಕೆಗಳನ್ನು ಪರಿಶೀಲಿಸಲಾಗುವುದು.

4. ಸಂಬಂಧಿಸಿದ ಇಲಾಖೆಗಳೊಡನ ಸಮಾಲೋಚನೆ ನಡೆಸಿ, ಉಳಿದ ಬೇಡಿಕೆಗಳನ್ನು ಶೀಘ್ರವೇ ಪೂರೈಸಲು ಸೂಕ್ತ ಕ್ರಮ ಜರುಗಿಸಲಾಗುವುದು.

ಅನುಬಂಧ 'ಎ'

ಬೇಡಿಕೆ ನಂ.1.

ಮಾಹೆಯಾನ ಪಿಂಚಣಿ: ರಾಜ್ಯ ಸರ್ಕಾರವು ಸ್ವಾತಂತ್ರ್ಯ ಯೋಧರಿಗೆ ಹಾಗೂ ಅವಲಂಬಿತರಿಗೂ ಮಾಸಿಕವಾಗಿ ರೂ. 500.00 ರಂತೆ ನೀಡಲಾಗುತ್ತಿದೆ. ಗೋವಾ ಸತ್ಯಾಗ್ರಹಿಗಳಿಗೆ ಮಾಹೆಯಾನ ರೂ. 400.00 ರಂತೆ ನೀಡಲಾಗುತ್ತಿದೆ.

ಬೇಡಿಕೆ ನಂ.2.

ಉಚಿತ ಬಸ್ ಪಾಸ್: ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರಿಗೆ ವರ್ಷಕ್ಕೆ ಒಂದು ಬಾರಿ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಕೆಎಸ್ಆರ್‌ಟಿಸಿ ಬಸ್‌ಗಳ ಸಾಮಾನ್ಯ ಉಚಿತವಾಗಿ ಪ್ರಯಾಣ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬೇಡಿಕೆ ನಂ.3.

ವೈದ್ಯಕೀಯ ಸೌಲಭ್ಯಗಳು: ವಾರ್ಷಿಕ ಆದಾಯದ ಮಿತಿಯನ್ನು ರೂ. 3600 ರಿಂದ ರೂ. 8000ಗಳಿಗೆ ಹೆಚ್ಚಿಸಲು ಈಗಾಗಲೇ ಆರೋಗ್ಯ ಇಲಾಖೆಗೆ ಸೂಕ್ತ ಪ್ರಸ್ತಾವನೆ ಕಳುಹಿಸಲಾಗಿದೆ.

ಬೇಡಿಕೆ ನಂ.4.

ನಿವೇಶನ ಹಂಚಿಕೆಯಲ್ಲಿ ಆದ್ಯತೆ ನೀಡುವ ಬಗ್ಗೆ: ಈ ಬೇಡಿಕೆಯನ್ನು ಪರಿಶೀಲಿಸಲು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿಕೊಡಲಾಗಿದೆ.

ಬೇಡಿಕೆ ನಂ.5.

ಶಿಕ್ಷಣ ಸೌಲಭ್ಯ: ಸರ್ಕಾರೀ ಆಜ್ಞೆ ಸಂಖ್ಯೆ: ಇಡಿ 15ಎಸ್‌ಸಿಎಲ್ 59ದಿನಾಂಕ: 27.11.1959ರ ಆದೇಶವನ್ನು ಪರಿಷ್ಕರಿಸಿ ಈಗಿನ ದರದಲ್ಲಿ ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಶಿಕ್ಷಣ ಇಲಾಖೆಯನ್ನು ಕೋರಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು

505 (61): ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 1990–91, 1991–92ನೇ ಡಿಸೆಂಬರ್ ಆಖೈರುವರೆಗೆ ನಡೆಸಿದ ಸಭೆ ಸಾಂಸ್ಕೃತಿಕ ಕಾರ್ಯಕ್ರಮಗಳು ಎಷ್ಟು ? (ವರ್ಷವಾರು ವಿವರ ನೀಡುವುದು):

ಆ. ಕನ್ನಡ ಸಾಹಿತ್ಯದ 'ಆಡಳಿತ ಭಾಷೆ ಕನ್ನಡ' ಈ ಬಗ್ಗೆ ಏನಾದರೂ ಕಾರ್ಯಕ್ರಮ ನಡೆದಿದೆಯೇ ? (ಇದರಲ್ಲಿ ಅದರ ವಿವರ ನೀಡುವುದು):

ಇ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಅತ್ಯಂತ ಚುರುಕಾಗಿ ಕೆಲಸ ಕಾರ್ಯ ನೇರವೇರಿಸಲು ಸರ್ಕಾರ ಏನಾದರೂ ಕ್ರಮಕೈಗೊಳ್ಳುವುದೇ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ. ಅನುಬಂಧ 1ರಲ್ಲಿ ನೀಡಲಾಗಿದೆ.

ಆ. ನಡೆಸಲಾಗಿದೆ
ಅನುಬಂಧ–2ರಲ್ಲಿ ನೀಡಲಾಗಿದೆ.

ಇ. ಇಲಾಖೆಯು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದೆ.